# ಕೆರೆ ಸಮ್ಮೇಳನದ ಸಮಾರೋಪ ಇಂದು

ಶಿರಸಿ: ನ.15 ರಂದು ತಾಲೂಕಿನ ಭೈರುಂಬೆಯಲ್ಲಿ ನಡೆಯಬೇಕಿದ್ದ ಕೆರೆ ಸಮ್ಮೇಳನದ್ದ ಗೋಷ್ಠಿಗಳು ಹಾಗೂ ಸಮಾರೋಪ ಸಮಾರಂಭ ಅನಿವಾರ್ಯ ಕಾರಣಗಳಿಗಾಗಿ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ನಡೆಯಲಿವೆ. ಸಾರ್ವಜನಿಕರು ಗಮನಿಸಬೇಕು ಹಾಗೂ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಬೇಕು ಎಂದು ಸ್ವರ್ಣವಲ್ಲೀ ಮಹಾಂಸ್ಥಾನದ ಉಪಾಧ್ಯಕ್ಷ ವಿ.ಎನ್ ಹೆಗಡೆ ಬೊಮ್ಮನಳ್ಳಿ ಹಾಗೂ ಕೆರೆ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.15 ರಂದು ಬೆಳಿಗ್ಗೆ 9–30 ಕ್ಕೆ ಡಾ॥ ರಮೇಶ ಹೆಗಡೆ ಕೆರೆ ಸಮ್ಮೇಳನದ 3ನೇ ದಿನದ ಗೋಷ್ಠಿಗಳನ್ನು ಉದ್ಘಾಟಿಸಲಿದ್ದಾರೆ. 3 ಸಮಾನಾಂತರ ಗೋಷ್ಠಿಗಳು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1–30 ರ ವರೆಗೆ ನಡೆಯಲಿವೆ ಈ ಗೋಷ್ಠಿಗಳಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಕೆರೆ ಸಮೀಕ್ಷೆ ವರದಿ ಮಂಡಿಸಲಿದ್ದಾರೆ. ತಾಂತ್ರಿಕ ಗೋಷ್ಠಿಗಳು ನಡೆಯಲಿವೆ.

ಮಧ್ಯಾಹ್ನ 2–30 ಕ್ಕೆ ಮುಕ್ತ ಸಂವಾದಗೋಷ್ಠಿಯ ಅಧ್ಯಕ್ಷತೆಯನ್ನು ಪರಿಸರ ತಜ್ಞ ಶ್ರೀ ವೈ.ಬಿ ರಾಮಕೃಷ್ಣ ವಹಿಸಲಿದ್ದಾರೆ. ಡಾ॥ ಕೇಶವ ಕೊರ್ಸೆ, ಶ್ರೀ ಬಾಲಚಂದ್ರ ಸಾಯಿಮನೆ, ಪ್ರೊ॥ ಸುಭಾಷ್‌ಚಂದ್ರನ್, ಡಾ॥ ಪ್ರಕಾಶ್ ಮೇಸ್ತ, ಶ್ರೀ ಶ್ರೀಧರ ಭಟ್, ಪ್ರೊ॥ ಕುಮಾರ ಸ್ವಾಮಿ ಮುಂತಾದ ಪರಿಸರ ತಜ್ಞರು ಕೆರೆಗಳ ಪುನಃಶ್ಚೇತನ, ಜಲಮೂಲಗಳ ಸಂರಕ್ಷಣೆ ಕುರಿತು ಅಭಿಪ್ರಾಯ ಮಂಡಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಸಮ್ಮೇಳನ ನಿರ್ಣಯಗಳನ್ನು ಅಂಗೀಕರಿಸಲಾಗುತ್ತದೆ.

ಸಮಾರೋಪ ಸಮಾರಂಭದಲ್ಲಿ ಪೂಜ್ಯ ಪೇಜಾವರ ಶ್ರೀ ಹಾಗೂ ಸ್ವರ್ಣವಲ್ಲೀ ಶ್ರೀ ಸಾನಿಧ್ಯ ವಹಿಸಲಿದ್ದಾರೆ. ಸಹ್ಯಾದ್ರಿ ಯುವ ವಿಜ್ಞಾನಿ ಪ್ರಶಸ್ತಿ ನೀಡಲಿದ್ದಾರೆ. ಸ್ವಾಮಿ ವಿಷ್ಣುಮಯಾನಂದ ಅವರಿಗೆ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ॥ ವಾಮನ್ ಆಚಾರ್ಯ ಅವರು ವೃಕ್ಷಲಕ್ಷ್ಮ ಪರಿಸರ ಪ್ರಶಸ್ತಿ ನೀಡಲಿದ್ದಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿನಯ್ ಲೂತ್ರಾ, ಜಿಲ್ಲಾಧಿಕಾರಿ ಉಜ್ವಲ್ ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಅಧಿಕಾರಿ ಡಾ॥ ರಾಂ ಪ್ರಸಾತ ಮನೋಹರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.